


ದೇವರುಗಳ ಎದುರೇ ಬಾಚಿ ತಬ್ಬಿಕೊಂಡು ಮುತ್ತಿನ ಮಳೆಗರೆದಳು. ಕೊಸರಾಡಿ ಬಿಡಿಸಿಕೊಂಡು ದೇವರಗೂಡಿನಲ್ಲಿದ್ದ ಸಾಲಿಗ್ರಾಮ ಎತ್ತಿಕೊಂಡ. 'ಇದನ್ನು ಹಿಡ್ಕೋ' ಅಂದ. 'ಹುಶ್ ಅದನ್ನು ಮುಟ್ಟಬಾರ್ದು' ಅಂತ ಬಿರುಗಣ್ಣು ತೋರಿದಳು. ಇವನು ಬಲವಂತವಾಗಿ ಅವಳ ಕೈಗಿಟ್ಟು, 'ಹೇಳು, ನನ್ನನ್ನೇ ಮದುವೆಯಾಗ್ತೀನಿ ಅಂತ' ಎಂದು ಥೇಟ್ ಹುಚ್ಚನಂತಾಡಿದ. 'ಆಗಲಿ ಮಾರಾಯ' ಅಂತ ಅವಳು ಅವನು ಹೇಳಿಕೊಟ್ಟಂತೆ ಹೇಳಿ ಅವನನ್ನು ಹಾಲ್‌ಗೆ ಕರೆ ತಂದು ಸಮಾಧಾನಿಸುವಷ್ಟರಲ್ಲಿ ಧವಳಪ್ಪನ ಗುಡ್ಡ ಎತ್ತಿಟ್ಟಂತಾಯಿತು.

ಇಷ್ಟಾದರೂ ಹುಡುಗಿ ಶಾಲೆಗೆ ಬರಲಿಲ್ಲ! ಈವತ್ತು ಅವಳ ವೀಣಾ ಪ್ರೋಗ್ರಾಮ್ ರಾಯರಮಠದಲ್ಲಿದೆ ಎಂದವಳ ಗೆಳತಿ ರಾಧಿಕಾ ಹೇಳಿದಾಗ ಕ್ಷಣ ಅವಾಕ್ಕಾದರೂ ಸಂಜೆಗೆ ಮಠಕ್ಕೆ ಓಡಿದ. ಮೊದಲ ಸಾಲಿನಲ್ಲೇ ಸೂಟುಬೂಟಿನ ಆದವಾನಿ ಕಂಡಾಗ ತಾನೆಲ್ಲೋ ಕಳೆದುಹೋಗುತ್ತಿರುವ ಅನುಭವವಾಗಿ ದೂರದಲ್ಲೆಲ್ಲೋ ನಿಂತು ನೋಡಿದ. ಅವಳು ಸಖತ್ತಾಗಿ ವೀಣೆ ನುಡಿಸಿದಾಗ ಹಿಗ್ಗಿದ. ಎಲ್ಲರೂ ಚಪ್ಪಾಳೆ ತಟ್ಟುವಾಗ ತಾನೂ ತಟ್ಟಿದ. ಚಪ್ಪಾಳೆಗಳು ನಿಂತರೂ ತಾನು ಮಾತ್ರ ತಟ್ಟುತ್ತಲೇ ಇದ್ದು, ಎಲ್ಲರ ಗಮನ ಸೆಳೆದ. ಹುಡುಗಿ ಸೂಟುಬೂಟಿನಿಂದ ದೃಷ್ಟಿ ಬದಲಿಸಿ ತನ್ನತ್ತ ನೋಡಿದ ನಂತರವೇ ಇವನ ಕೈಗೆ ವಿರಾಮ. ವಂದನಾರ್ಪಣೆಯ ಸಮಯದಲ್ಲಿ ಸೂಟಿನ ಆದವಾನಿ ಹಿಗ್ಗಿನಿಂದ ಮಾತನಾಡುತ್ತಾ, 'ನಿಮ್ಮ ಊರಿನ ಹುಡುಗಿಯ ಪ್ರೋಗ್ರಾಮ್